18. ರಾಯಚೂರು	7.71	13 ಕೊಳವೆ ಬಾವಿ ಕಾಮಗಾರಿಗಳು. 19 ಕಿರು ನೀರು ಸರಬರಾಜು. ಕಾಮಗಾರಿಗಳು. 109 ಭೂ ಸಂರಕ್ಷಣೆ.	30 ಸಣ್ಣ ಕೈಗಾರಿಕೆ ಕಾಮಗಾರಿಗಳು
19.ಬಳ್ಳಾರಿ	-	ಬಾಕಿ ಇರುವುದಿಲ್ಲ.	
20. ಬೀದರ್	2.66	ಬಾಕಿ ಇರುವುದಿಲ್ಲ.	
ಒಟ್ಟು	141.65		

ವಿಷಯ :- ಹುಬ್ಬಳ್ಳಿಯ ಹತ್ತಿರ ಜವಳಿ ನಗರದ ಸ್ಥಾಪನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 823 (755)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :- ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ- ಧಾರವಾಡ ಭಾಗದಲ್ಲಿ ಸ್ಥಾಪಿಸಬೇಕೆಂದಿರುವ ಜವಳಿ ನಗರದ ಅನುಷ್ಠಾನದ ಕಾರ್ಯಚಟುವಟಿಕೆ ಈಗ ಯಾವ ಹಂತದಲ್ಲಿ ಇದೆ? ಇನ್ನು ಎಷ್ಟು ನಿರ್ದಿಷ್ಟ ಅವಧಿಯಲ್ಲಿ ಈ ಜವಳಿ ನಗರ ಸ್ಥಾಪನೆ ಕೆಲಸ ಪ್ರಾರಂಭವಾಗುವುದು?

ಶ್ರೀ ಎಂ. ಎಸ್. ಪಾಟೀಲ್ (ಜವಳಿ ಸಚಿವರು) :-

ಅ) ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರದ ಆದೇಶ ಸಂಖ್ಯೆ ಸಿಐ 223 ಸಿಟಿಹೆಚ್ 94 ದಿನಾಂಕ 1-3-1996 ರಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಗೆ ವಹಿಸಿದೆ. ಈ ಬಗ್ಗೆ ಟೆಕ್ಸಾಕ್ ಸಂಸ್ಥೆಯಿಂದ 200 ಎಕರೆ ಜಮೀನನ್ನೊಳಗೊಂಡ ಪ್ರದೇಶಕ್ಕನುಗುಣವಾಗಿ ಯೋಜನಾ ವರದಿಯನ್ನು ತಯಾರಿಸಿ, ಕೆಐಎಡಿಬಿ ಇವರಿಗೆ ಸಲ್ಲಿಸಲಾಗಿದೆ. ಜವಳಿ ನಗರ ಸ್ಥಾಪಿಸಲು ನಿರ್ದಿಷ್ಟ ಜಮೀನನ್ನು ಗುರುತಿಸುವ ಕೆಲಸ ನಡೆದಿದೆ.

ಜಮೀನು ದೊರೆತ ಕೂಡಲೇ ಜವಳಿ ನಗರ ಸ್ಥಾಪನೆಯನ್ನು ಕೈಗೆತ್ತಿಕೊಂಡು ಪೂರ್ಣವಾದ ನಂತರ ಫಲಾನುಭವಿಗಳಿಗೆ ಜವಳಿ ಉದ್ಯಮ ಸ್ಥಾಪಿಸಲು ನೀಡಲಾಗುವುದು.